# ನಗರಸಭಾ ಕಾರ್ಯಾಲಯ ದಾಂಡೇಲಿ

ಕ್ರ.ಸಂ:ನಸದಾಂ:ಕಾವಿ:ನಗರಸಭೆ:CMSMTDP: ಟೆಂಡರು:ವಿವ: **154** ದಿನಾಂಕ:**27-05-2010**

## ಅಲ್ಪಾವಧಿ ಟೆಂಡರ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ನಗರಸಭೆ ದಾಂಡೇಲಿಯಲ್ಲಿ ಸಿವಿಲ್ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ 2009-10ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ ಯೊಜನೆಯಡಿಯಲ್ಲಿ ಹಾಗೂ 2010-11 ನೇ ಸಾಲಿನ ನಗರಸಭೆ ಅನುದಾನದಡಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗೆ ಐಟಂವಾರು ಟೆಂಡರಗಳನ್ನು ನಮೂನೆ **KW-1** ರ ಪ್ರಕಾರ ದ್ವೀ ಪ್ರತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000 ನಿಯಮದ ನಿಭಂದನೆಗೊಳಪಟ್ಟು ನಗರಸಭೆ ದಾಂಡೇಲಿ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ ಆಹ್ವಾನಿಸಲಾಗಿದೆ.ಈ ಬಗ್ಗೆ ಟೆಂಡರು ಹಾಕಲಿಚ್ಛಿಸುವ ಗುತ್ತಿಗೆದಾರರು ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಉತ್ತರ ಕನ್ನಡ ಕಾರವಾರ ರವರಲ್ಲಿ ಅಥವಾ ನಗರಸಭಾ ಕಾರ್ಯಾಲಯ ದಾಂಡೇಲಿದಲ್ಲಿಯೂ ಸಹ ಖಾಲಿ ಟೆಂಡರ ಬುಕ್ ಲೇಟಗಾಗಿ ಅರ್ಜಿ ಸಲ್ಲಿಸಿ, ಖಾಲಿ ಟೆಂಡರ ಬುಕ್ ಲೇಟ ಪಡೆಯಬಹುದಾಗಿದೆ. ತುಂಬಿದ ಮೋಹರಬಂದ್ ಮಾಡಿದ ಟೆಂಡರಗಳನ್ನು ಈ ಕೆಳಗೆ ನಿಗದಿ ಪಡಿಸಿದ ದಿನಾಂಕದಂದು ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಉತ್ತರ ಕನ್ನಡ ಕಾರವಾರ ರವರಲ್ಲಿಯೂ ಅಥವಾ ನಗರಸಭಾ ಕಾರ್ಯಾಲಯ ದಾಂಡೇಲಿಯಲ್ಲಿಯೂ ಸಹ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ನಗರಸಭೆಯ ಕಾರ್ಯಾಲಯದಲ್ಲಿ ಹಾಗೂ ವೆಬ್ ಸೈಟ್ www.dandelicity.gov.in ದಲ್ಲಿ ಪಡೆಯಬಹುದು.

1). ಖುಲ್ಲಾ ಟೆಂಡರ ಬುಕ್ ಲೇಟಗಾಗಿ ಅರ್ಜಿಸಲ್ಲಿಸಿ, ಖಾಲಿ ಟೆಂಡರ ಬುಕ್‌ಲೆಟ್ ಗಳನ್ನು ವಿತರಿಸುವ ಕೊನೆಯ ದಿನಾಂಕ: **29-06-2010** ಸಾಯಂಕಾಲ 5:30 ಗಂಟೆಯವರೆಗೆ ಮಾತ್ರ.

2) ತುಂಬಿದ ಮೋಹರಬಂದ್ ಟೆಂಡರ ಬುಕ್‌ಲೆಟ್ ಗಳನ್ನು ಸ್ವೀಕರಿಸುವ ದಿನಾಂಕ:**30-06-2010** ಸಾಯಂಕಾಲ 4:00 ಗಂಟೆಯವರೆಗೆ ಮಾತ್ರ.

3) ಸ್ವೀಕರಿಸಿದ ಮೋಹರಬಂದ್ ಮಾಡಿದ ಟೆಂಡರಗಳನ್ನು ದಿನಾಂಕ:**01-07-2010** ರಂದು ಗುತ್ತಿಗೆದಾರರ ಅಥವಾ ಅವರ ಪ್ರತಿನಿಧಿಗಳ ಸಮಕ್ಷಮ ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು.

| ಪ್ಯಾಕೇಜ್ ಕ್ರ.ಸಂ | ಕಾಮಗಾರಿಗಳ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷ ಗಳಲ್ಲಿ) | ಇ.ಎಂ.ಡಿ ಹಣ ರೂ ಗಳಲ್ಲಿ | ಟೆಂಡರ ಫಾರ್ಮ ಬೆಲೆ + 12.5% ವ್ಯಾಟ್ ರೂ ಗಳಲ್ಲಿ | ಗುತ್ತಿಗೆದಾರರ ದರ್ಜೆ | ಕಾಮಗಾರಿ ಪೂರ್ಣ ಗೋಳಿಸ ಬೇಕಾದ ಅವಧಿ (ಮಳೆಗಾಲ ಸಹಿತ) |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ವಾರ್ಡ ನಂ 10,13,15,ಹಾಗೂ 29 ಗಳಲ್ಲಿ ಗಟಾರ ನಿರ್ಮಿಸುವುದು | 1.18 ಲಕ್ಷ | 3000/- | 675/- | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 2 | ವಾರ್ಡ ನಂ 30 ಹಾಗೂ 31 ಗಳಲ್ಲಿ ಗಟಾರ ನಿರ್ಮಿಸುವುದು | 1.09ಲಕ್ಷ | 2800/- | 675/- | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 3 | ವಾರ್ಡ ನಂ 28 ಹಾಗೂ 29 ಗಳಲ್ಲಿ ಗಟಾರ ಮೇಲೆ ಫರ್ಸಿ ಕಲ್ಲು ಜೋಡಿಸುವುದು ಹಾಗೂ ವಾರ್ಡ ನಂ 4,8,15 ಹಾಗೂ 28 ಗಳಲ್ಲಿ ಗಟಾರಗಳನ್ನು ದುರಸ್ತಿ ಮಾಡುವುದು | 1.36ಲಕ್ಷ | 3400/- | 675/- | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |

| | | | | | | |
|---|---|---|---|---|---|---|
| 4 | ವಾರ್ಡ ನಂ 7 ಹಾಗೂ 18 ಗಳಲ್ಲಿ ಗಟಾರಗಳನ್ನು ನಿರ್ಮಿಸುವುದು | 1.19ಲಕ್ಷ | 3000/– | 675/– | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 5 | ವಾರ್ಡ ನಂ 2,5 ಹಾಗೂ 6 ಗಳಲ್ಲಿ ಗಟಾರ ನಿರ್ಮಿಸುವುದು | 1.20ಲಕ್ಷ | 3000/– | 675/– | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 6 | ವಾರ್ಡ ನಂ1,6,18,20 ಹಾಗೂ 21 ಗಳಲ್ಲಿ ಗಟಾರ ದುರಸ್ತಿ ಮಾಡುವುದು | 0.99ಲಕ್ಷ | 2500/– | 675/– | 4 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 7 | ವಾರ್ಡ ನಂ 1,5,14,26 ಹಾಗೂ 27 ಗಳಲ್ಲಿ ಗಟಾರ ನಿರ್ಮಿಸುವುದು | 0.99ಲಕ್ಷ | 2500/– | 675/– | 4 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 8 | ವಾರ್ಡ ನಂ 17,28 ಹಾಗೂ 29 ಗಳಲ್ಲಿ ಸಿ.ಸಿ.ಪೇವಿಂಗ್ ಮಾಡುವುದು | 1.00ಲಕ್ಷ | 2500/– | 675/– | 4 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 9 | ವಾರ್ಡ ನಂ 2,25 ಹಾಗೂ 27 ಗಳಲ್ಲಿ ಸಿ.ಸಿ.ಪೇವಿಂಗ್ ಮಾಡುವುದು | 0.99ಲಕ್ಷ | 2500/– | 675/– | 4 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 10 | ವಾರ್ಡ ನಂ 4 ಹಾಗೂ 15 ರಲ್ಲಿನ ನಗರಸಭೆ ಸ್ವಾಮಿತ್ವದ ಬಸ್ ಸ್ಟ್ಯಾಂಡ್ ದುರಸ್ಥಿ ಮಾಡುವುದು | 0.39ಲಕ್ಷ | 1000/– | 500/– | 4 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 11 | ವಾರ್ಡ ನಂ 3 ಹಾಗೂ 9 ಗಳಲ್ಲಿ ಯು.ಜಿ.ಡಿ. ಲೈನಗಳಿಗೆ ಮ್ಯಾನ್ ಹೋಲ್ ಗಳನ್ನು ನಿರ್ಮಿಸುವುದು. | 1.14 ಲಕ್ಷ | 2900/– | 675/– | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 12 | ನಗರಸಭೆ ಆವರಣದಲ್ಲಿ ಘನತ್ಯಾಜ ವಸ್ತು ವಿಲೇವಾರಿ ವಾಹನ ಗಳ ಶೆಡ್ ಗೆ ನೆಲಹಾಸು ಹಾಗೂಗಟಾರ ನಿರ್ಮಿಸುವುದು **(2009–10ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃಧ್ಧಿ ಅನುದಾನ)** | 5.95 ಲಕ್ಷ | 15000/– | 1125/– | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |

<u>ನಿಬಂಧನೆಗಳು</u>

1. ಮಂಜೂರಾದ ಟೆಂಡರ ಮೊತ್ತದ ಮೇಲೆ ಶೇ 5 ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ ನೀಡುವುದು. ನಂತರದಲ್ಲಿ ಒಪ್ಪಂಧ ಪತ್ರ ಮಾಡಿಕೊಂಡು ಕಾರ್ಯಾದೇಶವನ್ನು ನೀಡಲಾಗುವುದು.
2. ಉಳಿದ ಶರ್ತುಗಳು ಟೆಂಡರ ಬುಕ್ ಲೇಟ್ ನಲ್ಲಿ ಇರುವಂತೆ ಅನ್ವಯಿಸುತ್ತದೆ.
3. ಮುಂಗಡ ಠೇವಣಿ (ಇ.ಎಂ.ಡಿ) ಹಣವನ್ನು ಬ್ಯಾಂಕರ್ಸ ಚೇಕ್, ಪೇ ಆರ್ಡರ್, ಡಿ.ಡಿ ಮೂಲಕ ಅಥವಾ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪೌರಾಯುಕ್ತರು ನಗರಸಭೆ ದಾಂಡೇಲಿ ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.
4. ಚಾಲ್ತಿ ಸಾಲಿನ ಲೋಕೋಪಯೋಗಿ ಇಲಾಖೆ ಹಾಗೂ ನಗರಸಭೆ ದಾಂಡೇಲಿಯಲ್ಲಿ ಲೈಸನ್ಸ್ ನೊಂದಾಯಿಸಿದ ಅರ್ಹ ಗುತ್ತಿಗೆದಾರರು ಮಾತ್ರ ಟೆಂಡರ ಬುಕ್ ಲೇಟ್ ಪಡೆಯಲು ಅರ್ಹರು.

5. ಸರಕಾದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಾದೇಶ ನಿಡಲಾಗುವುದು. ಹಾಗೂ ಕಾಮಗಾರಿಗಳ ಬಿಲ್ಲನ್ನು ಸರಕಾದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಪಾವತಿಸಲಾಗುವುದು.
6. ಟೆಂಡರಿನಲ್ಲಿ ಹಾಕಲಿಚ್ಛಿಸುವ ಗುತ್ತಿಗೆದಾರರು ಸ್ಥಳ ತನಿಖೆ ಅವಶ್ಯಮಾಡಿ ಟೆಂಡರು ಸಲ್ಲಿಸತಕ್ಕದ್ದು.ತದನಂತರದಲ್ಲಿ ತಾಂತ್ರೀಕ ತೊಂದರೆಗಳಿಗೆ ನಗರಸಭೆಯು ಜವಾಬ್ದಾರರಾಗುವುದಿಲ್ಲ.ಹಾಗೂ
7. ಖಾಲಿ ಟೆಂಡರ ಬುಕ್ ಲೇಟ್ ವಿತರಿಸುವಾಗ ಗುತ್ತಿಗೆದಾರರ ಮೂಲ ನೊಂದಣಿ ಪುಸ್ತಕವನ್ನು ಕಡ್ಡಾಯವಾಗಿ ಹಾಜರು ಪಡಿಸಿ ಅದರಲ್ಲಿ ಕಾಮಗಾರಿಗಳ ವಿವರಗಳನ್ನು ದಾಖಲಿಸಲಾಗುವುದು.
8. ಕಾಮಗಾರಿಗಳು 3 ನೇ ಪಾರ್ಟಿಯಿಂದ ಗುಣಮಟ್ಟದ ಬಗ್ಗೆ ತಪಾಸಣೆ ಮಾಡಿ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.
9. ನಮೂದಿಸಿದ ದರವು ಎಲ್ಲ ತೆರಿಗೆಯನ್ನು ಒಳಗೊಂಡಿರತಕ್ಕದ್ದು, ಕಾಮಗಾರಿಗಳಿಗೆ ಬಳಸುವ ಸಾಮಾಗ್ರಿಗಳ ಗುಣಮಟ್ಟದ ಪ್ರಮಾಣ ಪತ್ರಗಳನ್ನು ತಮ್ಮ ಸ್ವಂತ ಖರ್ಚಿನಿಂದ ಕಡ್ಡಾಯವಾಗಿ ಅಳವಡಿಸತಕ್ಕದ್ದು.
10. ಗುತ್ತಿಗೆದಾರರು ನಮೂದಿಸಿದ ಒಟ್ಟು ಗುತ್ತಿಗೆ ಮೊತ್ತವು ಮಂಜೂರಾದ ಅಂದಾಜಿನ ದರಗಳನ್ನು ಗುತ್ತಿಗೆಗೆ ಇಟ್ಟ ಮೊತ್ತಕ್ಕೆ ಹೋಲಿಸಲಾಗಿ ಕಡಿಮೆ ಇದ್ದರೆ ಅವುಗಳ ವ್ಯತ್ಯಾಸದ ಮೊತ್ತವನ್ನು ಡಿ.ಡಿ.ರೂಪದಲ್ಲಿ ಪೌರಾಯುಕ್ತರು ನಗರಸಭೆ ದಾಂಡೇಲಿ ಇವರ ಹೆಸರಿನಲ್ಲಿ ಪಡೆದು ಒಪ್ಪಂಧ ಪತ್ರ ಮಾಡುವ ಸಮಯದಲ್ಲಿ ಸಲ್ಲಿಸಬೇಕು. ಇಲ್ಲವಾದಲ್ಲಿ ಅಂತಹ ಟೆಂಡರನ್ನು ತೀರಸ್ಕರೀಸಲಾಗುವುದು.
11 ಕಾಮಗಾರಿಯ ನಿರ್ವಹಣಾ ಅವಧಿಯನ್ನು 2 ವರ್ಷ ನಿರ್ವಹಿಸಿ ಕೊಡತಕ್ಕದ್ದು.ಕಾಮಗಾರಿಯ ಬಿಲ್ ನಲ್ಲಿ ಮುರಿತಾಯಗೊಂಡ ಭದ್ರತಾ ಠೇವಣಿಯನ್ನು ಅವಧಿ ಮುಗಿಯುವವರೆಗೆ ಇಟ್ಟುಕೊಳ್ಳಲಾಗುವುದು.ಈ ಕುರಿತು ಯಾವುದೇ ತಕರಾರು ಮಾಡತಕ್ಕದ್ದಲ್ಲ.
12. ಕಾಮಗಾರಿ ಛಾಯಾ ಚಿತ್ರ (ಫೋಟೋ) ಮೂರರಂತೆ (3) ಅಂದರೆ ಒಂದೆ ಸ್ಥಳದಲ್ಲಿ ಕಾಮಗಾರಿ ಪ್ರಾರಂಭಿಸುವ ಪೂರ್ವದಲ್ಲಿ, ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರದ ಛಾಯಾ ಪ್ರತಿ ಗುತ್ತಿಗೆದಾರರು ಹಾಗೂ ಕಿರಿಯ ಅಭಿಯಂತರರೊಂದಿಗೆ ಇರುವಂತಹದ್ದು ತಮ್ಮ ಸ್ವಂತ ಖರ್ಚಿನಿಂದ ತೆಗೆದು ನಗರಸಭೆಗೆ ಸಲ್ಲಸತಕ್ಕದ್ದು.ಮತ್ತು ಕಾಮಗಾರಿ ಮಾಹಿತಿ ನೀಡುವ ಫಲಕವನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು. ನಾಮಫಲಕ ಅಳವಡಿಸಿದ್ದರ ಬಗ್ಗೆ ತಮ್ಮ ಸ್ವಂತ ಖರ್ಚಿನಿಂದ ಛಾಯಾ ಚಿತ್ರವನ್ನು ತೆಗೆದು ನಗರಸಭೆಗೆ ಸಲ್ಲಿಸತಕ್ಕದ್ದು
13. ಟೆಂಡರಗಳನ್ನು ಅಂಗೀಕರಿಸುವ ಅಥವಾ ತೀರಸ್ಕರೀಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿ ಕೊಂಡಿದೆ.
14. ನಗರಸಭೆಗೆ ಹಾಗೂ ಸರಕಾರಕ್ಕೆ ಯಾವುದೇ ಬಾಕಿ ನಿಮ್ಮಿಂದ ಬರಬೇಕಾದಲ್ಲಿ ನಿಮ್ಮ ಬಿಲ್ ನಲ್ಲಿ ಕಟಾವು ಮಾಡಲು ಕ್ರಮ ಕೈಗೊಳ್ಳಲಾಗುವುದು.
15. ಸರಕಾರದಿಂದ ಕಾಲಕಾಲಕ್ಕೆ ಬದಲಾಗುವ ದರಗಳಂತೆ ರಾಜಧನವನ್ನು ತಮ್ಮ ಬಿಲ್ ನಲ್ಲಿ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

| | |
|---|---|
| ಸಹಿ ಇದೆ/– | ಸಹಿ ಇದೆ/– |
| **ಪೌರಾಯುಕ್ತರು** | **ಅಧ್ಯಕ್ಷರು** |
| **ನಗರಸಭೆ ದಾಂಡೇಲಿ** | **ನಗರಸಭೆ ದಾಂಡೇಲಿ** |